■ ಪದ್ಮನಾಭ ಭಟ್

# ಕೈಕೊಟ್ಟ ಹೀರೊಗಳು, ಮಂಕಾದ ಚಿತ್ರರಂಗ

ನಾಡಿನ ತುಂಬ ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿಯ ಬೆಳಕು ತುಂಬಿದ್ದರೆ, ಕನ್ನಡ ಚಿತ್ರರಂಗದಲ್ಲಿ ಬರದ ಛಾಯೆ. 'ತಾರೆಗಳಿಲ್ಲದ ಆಕಾಶ'ದಂತೆ ಪೇಲವವಾಗಿರುವ ಸಿನಿಮಾರಂಗದ ಇಂದಿನ ದುಸ್ಥಿತಿಗೆ ಕಾರಣ ಹುಡುಕುತ್ತಾ ಹೋದರೆ, ತಾರಾ ವರ್ಚಸ್ಸಿನ ನಾಯಕನಟರು ಎದುರಾಗುತ್ತಾರೆ. ಇವರೆಲ್ಲ, ವರ್ಷಕ್ಕೊಂದು ಸಿನಿಮಾ ಮಾಡಲೂ ಹೆಣಗುತ್ತಿರುವ ಹಾಗೂ ವಿಭಿನ್ನ ಪಾತ್ರಗಳಿಗೆ ಬೆನ್ನು ಹಾಕಿರುವ ಕಾರಣದಿಂದಾಗಿ ಕನ್ನಡ ಸಿನಿಮಾದಲ್ಲಿ ಬೆಳಕಿನ ಕೊಯಿಲಿನ ಬದಲು ನಿರಾಶೆಯ ಕತ್ತಲು ಕಾಣಿಸುತ್ತಿದೆ.

